# ಅಮಾಯಕ ಪಾತ್ರವೇ ನನ್ನ ಮೆಚ್ಚು

**ಸಂಧ್ಯಾ ಉದಯದ 'ನಯನತಾರಾ' ಇಂದ್ರಾಣಿ**



◆ **ಇಂದ್ರಾಣಿ ಗುಣಸ್ವಭಾವ ವೈರುಧ್ಯದಿಂದ ಕೂಡಿದೆ ಏಕೆ ಹೀಗೆ?**

ಇಂದ್ರಾಣಿ ಪಾತ್ರ ಅದ್ಭುತವಾಗಿದೆ. ನಾನು ಇದುವರೆಗೂ ನೆಗೆಟಿವ್ ಪಾತ್ರ ಮಾಡಿರಲಿಲ್ಲ. ನನಗೆ ಅಂತಹ ಪಾತ್ರ ಸೂಕ್ತ ಆಗುವುದಿಲ್ಲ ಎನ್ನುವ ಆಲೋಚನೆಯೇ ತುಂಬ ದೀರ್ಘಕಾಲದಿಂದ ಇತ್ತು. ಕಿರುತೆರೆಗೆ ಬಂದು 20 ವರ್ಷಗಳೇ ಕಳೆದಿವೆ. ಯಾವತ್ತೂ ಇಂತಹ ಪಾತ್ರ ನಿರ್ವಹಣೆಯನ್ನೇ ಮಾಡಿರಲಿಲ್ಲ. ತಿಲಕ್ ಅವರು ಕರೆದು ಇದನ್ನು ಮಾಡಲು ಹೇಳಿದರು. ನನಗೆ ಇದು ಸರಿ ಹೋಗುತ್ತಾ ಎಂದು ಮರು ಪ್ರಶ್ನೆಯನ್ನು ಮಾಡಿದ್ದೆ. ಅದಕ್ಕವರು 'ಹಾಗೆಯೇ ಇರಬೇಕು. ಒಂದು ರೀತಿ ಗೋಮುಖ ವ್ಯಾಘ್ರದಂತೆ ಮಾಡಬೇಕು. ಮುಖ ಸೌಮ್ಯವಾಗಿಯೇ ಇದ್ದು, ಮನಸ್ಸು ಮಾತ್ರ ಕ್ರೂರವಾಗಿರಬೇಕು. ನಿಮಗೆ ತುಂಬ ಸೂಕ್ತವಾಗುತ್ತದೆ' ಎಂದರು. ಅಂತಹ ಗುಣಗಳ ಇಂದ್ರಾಣಿಯನ್ನೇ ತೋರಿಸುತ್ತಿದ್ದಾರೆ. ಈಕೆ ಮಗನ ಮುಂದೆ ಮಮತಾಮಯಿ ತಾಯಿ. ಅವನ ಬೆನ್ನಿಗೆ ತುಂಬ ದುಷ್ಟ ಮಹಿಳೆಯಾಗಿರುತ್ತಾಳೆ. ಇದು ಒಂದು ರೀತಿ ಖುಷಿ ಕೊಡುತ್ತದೆ. ಮತ್ತೊಂದೆಡೆ ಬೇಸರವನ್ನೂ ಉಂಟು ಮಾಡುತ್ತದೆ. ಬೇಸರ ಏಕೆಂದರೆ, ವೀಕ್ಷಕರು 'ಇಂದ್ರಾಣಿಯನ್ನು ಹೊಡೆದು ಹಾಕಬೇಕು. ಕೊಚ್ಚಿ ಹಾಕಬೇಕು' ಎಂದು ನಿಂದಿಸುತ್ತಾರೆ ಅದನ್ನು ಕೇಳಿದಾಗ ಅಯ್ಯೋ ಅಪ್ಪಾ ಹೀಗೂ ಅಂತಾರೆ ಎಂದು ಬೇಜಾರಾಗುತ್ತದೆ. ಆದರೂ ಜನರನ್ನು ತಲುಪುತ್ತಿದೆ ಎನ್ನುವುದು ಮಾತ್ರ ಸಮಾಧಾನವನ್ನು ನೀಡಿದೆ.

◆ **ನೀವು ಟೀವಿ ಪ್ರವೇಶ ಮಾಡಿದ ಕಾಲವನ್ನು ಇವತ್ತು ನಿಂತು ನೋಡಿದರೆ.**

ಅದು ಹೆಚ್ಚು ಬದ್ಧತೆಯಿಂದ ಕೆಲಸ ಮಾಡುವ ಕಾಲವಾಗಿತ್ತು ಎಂದು ಅನ್ನಿಸುತ್ತದೆ. ಅದಕ್ಕೆ ನಾನು ಕೆಲಸ ಮಾಡಿದ ನಿರ್ದೇಶಕರೂ ಕಾರಣ ಇರಬಹುದು. ಟಿ.ಎಸ್. ನಾಗಾಭರಣ, ಟಿ.ಎನ್. ಸೀತಾರಾಂ, ಪಿ. ಶೇಷಾದ್ರಿ ಅವರಂತಹ ನಿರ್ದೇಶಕರ ಕೈಯಲ್ಲಿ ಪಳಗಿದೆ. ಆಗೆಲ್ಲ ಕೆಲಸದಲ್ಲಿ ಅಚ್ಚುಕಟ್ಟು ಮತ್ತು ಸ್ಪಷ್ಟವಾಗಿಯೇ ಬರಬೇಕಿತ್ತು. ಒಂದೊಂದು ದೃಶ್ಯ ಐದು ಪುಟದಷ್ಟು ಇರುತ್ತಿತ್ತು. ಅದನ್ನೆಲ್ಲ ಕಲಿಯಲೇ ಬೇಕಿತ್ತು. ಈಗ ಅದನ್ನು ನೆನಪಿಸಿದರೆ ಶಾಲೆಗೆ ಹೋಗುವ ಮಗು ಸೈಕಲ್ಲಿನಲ್ಲಿ ಹೋಗುತ್ತದೆ. ಅದೇ ಮಗು ದೊಡ್ಡದಾಗಿ ಕಾಲೇಜಿಗೆ ಹೋಗುವಾಗ ಕಾರು ಏರಿದಂತೆ ಕಾಣಿಸುತ್ತದೆ. ಆಗಿನ ನಿರ್ದೇಶಕರಿಗೆ ತಾಳ್ಮೆ ಹೆಚ್ಚಿತ್ತು. ಈಗ ಒತ್ತಡ ಹೆಚ್ಚಿದೆ. ಸಮಯಕ್ಕೆ ಸರಿಯಾಗಿ ನಿರ್ದಿಷ್ಟ ಗುರಿ ಮುಟ್ಟಲೇಬೇಕು.

◆ **ಅಭಿನಯದ ಆರಂಭ ಆಗಿದ್ದು ಹೇಗೆ?**

ನನಗೆ ನಾಟಕ–ಕಿರುತೆರೆಗೆ ಅಭಿನಯಕ್ಕೆ ಬರುವ ಅಪೇಕ್ಷೆ ಇರಲಿಲ್ಲ. ಆದರೂ ಡ್ರಾಮಾದಿಂದ ಸೀರಿಯಲ್‌ಗೆ ಬಂದಿದ್ದೇನೆ. ಆಕಸ್ಮಿಕವಾಗಿ ಒಂದು ನಾಟಕವನ್ನು ಮಾಡಬೇಕಾಯಿತು. ಅದು ರಾಷ್ಟ್ರೀಯ ಮಟ್ಟವನ್ನು ಪ್ರತಿನಿಧಿಸಿತು. ನಮ್ಮ ತಂಡ ಮುಂಬೈಗೆ ನಾಟಕ ಪ್ರದರ್ಶನಕ್ಕೆ ಒಮ್ಮೆ ಹೋಗಿತ್ತು. ಅಲ್ಲಿ ನಾಗಾಭರಣ ಭೇಟಿಯಾದರು. ಅವರು 'ಮಹಾಮಾಯಿ' ಮಾಡ್ತಿದ್ದರು. ಆ ಸಮಯಕ್ಕೆ ಅತ್ಯಂತ ಜನಪ್ರಿಯ ಧಾರಾವಾಹಿಗಳಲ್ಲಿ ಒಂದಾಗಿತ್ತು. ಅದಕ್ಕೆ ಕರೆದರು. ನನಗೆ ಹೋಗುವ ಮನಸ್ಸು ಇರಲಿಲ್ಲ. ಏಕೆಂದರೆ, ನನಗೆ ಅಭಿನಯ ಬರ್ತಾ ಇರಲಿಲ್ಲ. ಕೆಲವು ಅಕ್ಷರಗಳ ಉಚ್ಚರಣೆಯಲ್ಲೇ ತಪ್ಪಾಗುತ್ತಿತ್ತು. ಅದಾಗಿಯೇ ಬಂದ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ಮಾಡಿದೆ. ತಿದ್ದಿ ತಿದ್ದಿ ಕಲಿಸಿದರು. ಅವರು ಹೇಳಿಕೊಟ್ಟಿದ್ದರಿಂದ ಮುಂದುವರಿಯಲು ಸಾಧ್ಯ ಆಯಿತು. ಕಲಿಯಲೇಬೇಕು ಎನ್ನುವ ದೃಷ್ಟಿಯಿಂದ ಬಂದು ಅಭಿನಯಿಸುತ್ತಿದ್ದೇನೆ. ಆರಂಭದಲ್ಲಿ ತುಂಬ ಕಷ್ಟವನ್ನೂ ಇಲ್ಲಿ ಅನುಭವಿಸಿದ್ದೇನೆ.

◆ **ವೀಕ್ಷಕರು ನಿರಾಕರಿಸುವ ಪಾತ್ರ ನಿರ್ವಹಣೆಯ ಸವಾಲುಗಳೇನು?**

ಬೇರೆ ಪಾತ್ರಗಳಲ್ಲಿ ನನ್ನ ಧ್ವನಿ ಮಧುರವಾಗಿ ಇರುತ್ತಿತ್ತು. ಇದರಲ್ಲಿ ಸ್ವಲ್ಪ ಒರಟು ಆಯಿತು. ಇದು ಚೆನ್ನಾಗಿ ಬಂದಿದೆ ಎಂದು ನಿರ್ದೇಶಕರು ಹೇಳಿದಾಗ ನಾನು ಏನೋ ಮಾಡ್ತಿದ್ದೀನಿ ಎನ್ನುವ ವಿಶ್ವಾಸ ಬಂದಿದೆ. ನನ್ನ ಪಾತ್ರದಲ್ಲಿ ಏನಾದರೂ ತಪ್ಪುಗಳಿದ್ದರೆ ಹೇಳಿ ಎಂದೇ ನಾನು ಯಾವತ್ತೂ ಕೇಳುತ್ತೇನೆ. ತಪ್ಪಿದ್ದರೆ ತಿದ್ದಿಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಸಾಯುವ ತನಕ ಕಲಿಯುವುದು ಇದ್ದೇ ಇದೆ. ಪ್ರತಿದಿನ ಸವಾಲು ಇದ್ದೇ ಇದೆ. ಒಂದೊಂದು ಡೈಲಾಗ್ ಕೂಡ ನೆನಪಿನಲ್ಲಿ ಇಟ್ಟುಕೊಂಡೇ ನಟಿಸಲು ಯತ್ನಿಸುತ್ತೇನೆ. ಇದರಲ್ಲಿ ಮೇಕಪ್ ಹಾಕಿದ ತಕ್ಷಣ ಇಂದ್ರಾಣಿಯಾಗುತ್ತೇನೆ. ರಾಹುಲ್ ತಾಯಿಯಾಗಿ ಬದಲಾಗಿರುತ್ತೇನೆ. ಅವನ ಜೊತೆ ತುಂಬ ಭಾವುಕತೆಯಿಂದ ನಡೆದುಕೊಳ್ಳುತ್ತೇನೆ. ಅದನ್ನು ಬಿಟ್ಟು ಬೇರೆ ಯಾರ ಜೊತೆ ವ್ಯವಹರಿಸಿದರೂ ಭಿನ್ನವಾಗಿರುತ್ತೇನೆ.

◆ **ನಿಮ್ಮ ಮೆಚ್ಚಿನ ಪಾತ್ರದ ಬಗ್ಗೆ ಹೇಳುವುದಾದರೆ.**

ಅಭಿನಯದ ಮೊದಲ ಅನುಭವ ನೀಡಿದ ಹುಚ್ಚಿ ಪಾತ್ರದ ಬಗ್ಗೆ ಅತ್ಯಂತ ಮೆಚ್ಚುಗೆ ಇದೆ. ಅಮಾಯಕತೆ ಆ ಪಾತ್ರದಲ್ಲಿ ಇತ್ತು. ದೇವಿಯ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ಆಸೆ ಇದೆ. ಅದನ್ನು ಮಾಡಿದರೆ ಏನೋ ಫುಲ್‌ಫಿಲ್ ಆಯಿತು ಎನಿಸುತ್ತದೆ. ಈ ರಂಗದಲ್ಲಿ ಕೆಲವರು ಏನೇನೋ ತೊಂದರೆ ಆಯ್ತು ಎನ್ನುವುದನ್ನು ಕೇಳಿದ್ದೇನೆ. ನನಗೆ ಏನೂ ತೊಂದರೆ ಆಗಿಲ್ಲ. ಒಳ್ಳೆಯ ರೀತಿಯಲ್ಲಿ ಕಿರುತೆರೆ ನಡೆದುಕೊಂಡಿದೆ. ದಿನಗಳ ಕ್ಲ್ಯಾಶ್, ಜಗಳ ತೀರ ಸಹಜ. ಅದನ್ನು ಬಿಟ್ಟರೆ ತುಂಬ ಖುಷಿ ಮತ್ತು ನೆಮ್ಮದಿ ಇಲ್ಲಿ ಸಿಕ್ಕಿದೆ.

■ **ರಾಘವೇಂದ್ರ ಕೆ.**